ಹಸಿವಿಗೆಂದೇ ಅವಳ ನಂಬಿಕೆ.

ಪುನಃ ಕೂಸನ್ನು ರಮಿಸುತ್ತ ಅಡುಗೆಮನೆಗೆ ಹೋದಳು. ಅಡುಗೆಮನೆ ಎಂದರೆ ಅದೊಂದು ಬೇರೆ ಕೋಣೆ ಎಂದೇನೂ ಇಲ್ಲ. ಇದೊಂದು ಹಳೇಕಾಲದ ಪಾಳುಬಂಗಲೆಯ ಗಾಡಿಖಾನೆಯ 'ಮನೆ' ಎನ್ನಿಸಿಕೊಳ್ಳುವುದರ ಒಂದು ಮೂಲೆ ಮಾತ್ರ. ಅಲ್ಲೊಂದು ಕೆಮ್ಮಣ್ಣಿನ ಒಲೆ. ಅದರ ಬದಿಗೊಂದು ಜಾಯಿಕಾಯಿ ಹಲಗೆಯ ಪೆಟ್ಟಿಗೆ, ಅದಕ್ಕೊಂದು ಬೀಗ ಹಾಕಿದೆ. ಮೂಲೆಯೇ ಅಡುಗೆಮನೆ.

ಮಗುವಿಗೆ ಅಲ್ಲೇನಾದರೂ ತಿನ್ನುವುದಕ್ಕೆ ದೊರಕಿಸಿಕೊಟ್ಟರೆ ಅದು ಅಳು ನಿಲ್ಲಿಸುವುದೆಂಬ ಭ್ರಮೆ ಜಾನಕಿಗೆ. ಅಳುತ್ತಿರುವ ಮಗುವನ್ನು ಎತ್ತಿಕೊಂಡೇ ಏನು ನೆನೆದೊ ಏನೊ ನಗುತ್ತಾ ಪೆಟ್ಟಿಗೆಯ ಬೀಗವನ್ನೇ ದುರದುರನೆ ನೋಡಿ ಅಲ್ಲೆಲ್ಲಾ ತಪಾಸಣೆ ನಡೆಸಿದಳು. ಆ ಪೆಟ್ಟಿಗೆ ಮೇಲೆ ಒಂದೆರಡು ಓಬಿರಾಯನ ಕಾಲದ ಹಿತ್ತಾಳೆ ಪಾತ್ರೆಗಳಿದ್ದವು. ಅದರ ಬದಿಗೆ ನಾಲ್ಕಾರು ಹೇರಳೇ ಹಣ್ಣು. ಬಹುಶಃ ಜಾನಕಿಯ ಅಕ್ಕ ವನಜ ಯಾರದೊ ಮನೆ ಮರದಿಂದ ಉಪ್ಪಿನ ಕಾಯಿಗೆ ಆಗಬಹುದೆಂದು ಹರಿದುಕೊಂಡು ಬಂದಿರಬೇಕು.

ಅದನ್ನು ಕಿತ್ತಳೆ ಹಣ್ಣೆಂದು ಭ್ರಮಿಸಿ ಕೈಗೆ ಆಸೆಯಿಂದೆತ್ತಿಕೊಂಡೊಮ್ಮೆ ಮೂಸಿ ನೋಡಿ ಇಟ್ಟಳು ಜಾನಕಿ.

ಮಗು ಆಸೆಗಣ್ಣಿನಿಂದ ಆ ಹಣ್ಣು ನೋಡುತ್ತ ಅಳುವಿನ ರಾಗ ಹಾಡುತ್ತಲೇ ಇತ್ತು.

ಜಾನಕಿ ಕಣ್ಣು ಒಲೆ ಬದುವಿನ ಮೇಲೆ ಹೋಯಿತು. ಸಣ್ಣದೊಂದು ಅನ್ನದ ಪಾತ್ರೆ. ರಾತ್ರಿಗಾಗಿ ಕೆಲವು ಬಾರಿ ಅದರಲ್ಲಷ್ಟು ಅನ್ನ ಮಿಗಿಸಿಟ್ಟಿರುತ್ತಿದ್ದಳು ವನಜ. ಆದರೆ ಈಗ ಅನ್ನವೂ ಒಪ್ಪೊತ್ತಿಗೇ ಮುಗಿದು ಅದೂ ಖಾಲಿಯಾಗಿ ನೆನೆಯಲು ನೀರು ತುಂಬಿಸಿಕೊಂಡಿತ್ತು. ಕೆಳಗಡೆಯಲ್ಲಿ ಬೂದಿಗುಡ್ಡೆ. ಅದರ ಪಕ್ಕದ ಬೊಂಬಿನ ಊದುಗೊಳವೆಯನ್ನೇ ಸರಹದ್ದು ಮಾಡಿದೆ. ಅದರಾಚೆ ಎರಡು ಸುಡದ ಹುರುಳಿ ಖಾರದ ಹಪ್ಪಳ ಮರೆತಿಟ್ಟು ಹೋಗಿಬಿಟ್ಟಿದ್ದಳು ವನಜ.

ಆ ಉರಿಗಾರದ ಕೆಂಪು ಕೆಂಪಾದ ಹಪ್ಪಳವನ್ನೇ ಮುರಿದು ಮಗುವಿನ ಬಾಯಿಗೆ ತುರುಕಿದಳು. ಒಂದೇ ಕ್ಷಣ ಅಳು ನಿಲ್ಲಿಸಿ ಆ ಮಗು ಒಮ್ಮೆ ಹಪ್ಪಳ ಚಪ್ಪರಿಸಿತೊ ಇಲ್ಲವೊ ತುಟಿ ನಾಲಿಗೆ ಮುಖವನ್ನೆಲ್ಲಾ ಕೆಂಪು ಮಾಡಿಕೊಂಡು ಮತ್ತಷ್ಟು ದನಿ ಏರಿಸಿ ಸೂರು ಮುರಿಯುವಂತೆ ಅಳತೊಡಗಿತು.

'ಖಾರವಾಯಿತೆ ನನ್ನಪ್ಪಾ...' ಎನ್ನುತ್ತಾ ಸಕ್ಕರೆಗಾಗಿ ಅಲ್ಲೆಲ್ಲಾ ತಡಕಿದಳು. ಸಕ್ಕರೆಯೂ ಇಲ್ಲ ಬೆಲ್ಲವೂ ಇಲ್ಲ.

ಅದೇನು ಜಾನಕಿ ಬಾಲ್ಯದಲ್ಲಿದ್ದ ಮನೆಯೆ? ಆಗ ಅವಳ ತಂದೆಯ ಮನೆ ತುಂಬಿತ್ತು. ಎರಡೇ ಹೆಣ್ಣುಮಕ್ಕಳನ್ನು ಅತಿ ಮುದ್ದಾಗಿ ಬೆಳೆಸಿದ್ದರು, ಗ್ರಾಮ ಪ್ರದೇಶವಾದುದರಿಂದ ಓದಿನ ಶ್ರಮವೂ ಇರಲಿಲ್ಲ. ಉಂಡುಟ್ಟು ಕಾಲ ಕಳೆದು ಮದುವೆಯನ್ನು ಮಾಡಿಕೊಂಡುಬಿಟ್ಟವು. ಆ ತಂದೆ ತಾಯಿ ಬೇಗ ಹೋಗಿಯೇ ಹೋದರು. ಆ ಸಮಸ್ತ ಸುಖ, ಸಿರಿಯೂ ಹೇಗೆ ಹೇಗೊ ಸವೆದುಹೋಯಿತು. ಮೊದಲ ಅಳಿಯ ವನಜಳ ಗಂಡ ಚೆನ್ನಾಗಿ ಮನೆ ತೊಳೆದು ಅಸುನೀಗಿದ. ನಂತರ ಬಂದ ಎರಡನೇ ಅಳಿಯ ಎಲ್ಲ ರೀತಿಯಲ್ಲೂ ಮೊದಲ ಅಳಿಯನನ್ನು ಮೀರಿಸಿದ. ಈಗ ಜಾನಕಿಯಲ್ಲಿ ಏನೇನೂ ಇಲ್ಲ. ತಂದೆ, ತಾಯಿ, ಗಂಡ, ದುಡ್ಡು ಕೊನೆಗೆ ಬುದ್ಧಿಯೂ ಇಲ್ಲ! ಜಗತ್ತಿನಷ್ಟೇ ಉರುಟಾದ ದೊಡ್ಡ ಸೊನ್ನೆ ಅವಳ ಜೀವ.

ತಂದೆ ತಾಯಿ ಸತ್ತಾಯಿತು... ಹುಚ್ಚಿ... ಮಗುವನ್ನೂ ಬಿಟ್ಟು ಗಂಡ ಓಡಿ ಹೋಗಿ